ತಾರೀಖು 7ನೆ ಅಕ್ಟೋಬರ್ 1903.

ನಂ. ರೆ. 1038—ರೆ. ಫೈ. 35-1901, ಮೂಡಗೆರೆ ತಾಲ್ಲೂಕಿನ ಅಮಲ್ದಾರ್ರಾದ ಮೆ|| ಅಬ್ದುಲ್ ಹಕೀಂ ಯವರಿಗೆ 1903ನೆ ಜುಲೈ 2ನೆ ಮಕ್ತುಂ ರೆ. 9—ರೆ. ಫೈ. 35-01ನೆ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ 15 ದಿನಗಳ ಪ್ರಿವಿಲೇಜ್ ರಜಾದ ಪೈಕಿ ಅವರು ಸದರಿ ತಿಂಗಳ 20ನೆ ತಾರೀಖಿನ ಪೂರ್ವಾಹ್ನದಾರಭ್ಯ 4 ದಿನಗಳ ರಜಾವನ್ನು ಮಾತ್ರ ಉಪಯೋಗಿಸಿಕೊಂಡದ್ದರಿಂದ ಮೇಲ್ಕಂಡ ಪ್ರಿವಿಲೇಜ್ ರಜಾ ಇದರಿಂದ ರದ್ದು ಮಾಡಲ್ಪಟ್ಟು ಅವರ ಗೈರ್ಹಾಜರೀ ಕಾಲವು ಕ್ಯಾಜುಯಲ್ ರಜಾವಾಗಿ ಎಣಿಸಲ್ಪಟ್ಟಿರುತ್ತೆ.

ಹುಕುಂ ಬವೋಜೀಬ್,
ಹೆಚ್. ವಿ. ನಂಜುಂಡೈಯ್ಯ,
ಜನರಲ್ ವ ರವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಟೆರಿ.

ಫಾರೆಸ್ಟ್.

ಇಸ್ತಿಹಾರ್ನಾಮೆ.

ತಾರೀಖು 14ನೆ ಅಕ್ಟೋಬರ್ 1903.

ನಂ. 175—2498, ಸ್ಯ 1903ನೆ ಆಗಸ್ಟ್ 5ನೆ ಮಕ್ತುಂ 84-1007ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟಿದ್ದ 41 ದಿನಗಳ ಪ್ರಿವಿಲೇಜ್ ರಜಾದೊಂದಿಗೆ ಆದೇತಿಂಗಳು 14ನೆ ಮಕ್ತುಂ 99—1216ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಇನ್ನೂ 10 ದಿನಗಳು ಜಾಸ್ತಿ ರಜಾ ಕೊಡಲ್ಪಟ್ಟಿದ್ದ ಮೈಸೂರು ಡಿಸ್ಟ್ರಿಕ್ಟಿನ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕಂಟ್ರೋಲರಾದ ಮೆ|| ಪಿ. ಇ. ಬ್ರೆಸ್ಯರವರು ಆದೇ ತಿಂಗಳು 17ನೆ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದು ರಿಪೋರ್ಟು ಮಾಡಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವೆಂದರೆ 4 ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ಹುಕುಂ ಬವೋಜೀಬ್,
ಎಂ. ಮುತ್ತಣ್ಣ,
ಫಾರೆಸ್ಟ್ ಇಲಾಖೆಯ ಗವರ್ನಮೆಂಟ್ ಅಫೀಷಿಯೇಟಿಂಗ್ ಸೆಕ್ರಟೆರಿ.